<u>ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.</u>

ಸಿ.ಸಿ. ನಂಃ 997/2023 ಸಿಡಬ್ಲೂ : 4 ಪಿಡಬ್ಲೂಃ 2

ಪ್ರಮಾಣವಚನ ಬೋಧಿಸಲಾಯಿತು ದಿಃ 05-11-2025

ಹೆಸರು : ಮಲಕಪ್ಪ

ತಂದೆ ಹೆಸರು : ಶಿವಪ್ಪ

ವಯಸ್ಸು : 45 ವರ್ಷ

ಉದ್ಯೋಗ : ಮುಖ್ಯ ಪೇದೆ ಮಳಖೇಡ್ ಪಿ ಎಸ್

ವಾಸಸ್ಥಳ : ಮಳಖೇಡ್

**: ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ :**

ನಾನು 2020 ರಿಂದ ಇಲ್ಲಿಯ ವರೆಗೂ ಮಳಖೇಡ್ ಪಿ ಎಸ್ ನಲ್ಲಿ ಮುಖ್ಯ ಪೇದೆ ಎಂದು ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಅವದಿಯಲ್ಲಿ ದಿಃ 01-06-2023 ರಂದು ನಾನು ಠಾಣೆಯಲ್ಲಿದ್ದಾಗೆ ಚಾ ಸಾ 1 ರವರು ತಿಳಿಸಿದ್ದೇನೆಂದರೆ ಮಳಖೇಡ್ ಠಾಣಾ ವ್ಯಾಪ್ತಿಯ ಹೂಡಾ ಬಿ ಗ್ರಾಮದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾರುತ್ತಿದ್ದಾರೆ ಅಂತಾ ಬತಮಿ ಬಂದ ಮೇರೆಗೆ ನಾನು ಮತ್ತು ಚಾ ಸಾ 5 ರಿಂದ 7 ಹಾಗೂ ಪಂಚರಾದ ಚಾ ಸಾ 2ಮತ್ತು 3 ರವರನ್ನು ಬರ ಮಾಡಿಕೊಂಡು ನಮಗೆ ಬಾತಮಿ ಬಂದಿರುವ ವಿಷಯವನ್ನು ತಿಳಿಸಿ ದಾಳಿ ಮಾಡಬೇಕಾಗಿದೆ ಎಂದು ತಿಳಿಸಿರುತ್ತಾರೆ. ಚಾ ಸಾ 1 ರವರು ತಿಳಿಸಿದ ಮೇರೆಗೆ ನಾವು ಡಿ ವೈ ಎಸ್ ಪಿ ಚಿಂಚೋಳ್ಳಿ ಹಾಗಾ ಸಿ ಪಿ ಐ ಸೇಡಂ ರವರ ಮಾರ್ಗದರ್ಶನದಲ್ಲಿ ಠಾಣೆಯಿಂದ ಸರ್ಕಾರಿ ಜೀಪು ನಂ. ಕೆ ಎ 32 ಜಿ 699 ಮುಖಾಂತರ ಹೂಡಾ ಬಿ ಗ್ರಾಮಕ್ಕೆ ತಲುಪಿ ಬಾಬು ಟೇಲರ್ ರವರ ಮನೆಯ ಹತ್ತಿರ ಪಕ್ಕದ ರಸ್ತೆಯ ಮೇಲೆ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮಧ್ಯಮಾರಾಟ ಮಾರುತ್ತಿದ್ದಾನೆ ಎಂದು ಖಚಿತ ಪಡಿಸಿಕೊಂಡು ಎಲ್ಲಾರೂ ಒಮ್ಮೆಲೆ ದಾಳಿ ಮಾಡಲಾಗಿ ಆತನು ನಮಗೆ ಸಮವಸ್ತ್ರದಲ್ಲಿ ನೋಡಿ ಅಲ್ಲಿಂದ ಹೋಡಿ ಹೋಗಲಾರಂಬಿಸಿದನು. ನಂತರ ಘಟನಾ ಸ್ಥಳದಲ್ಲಿರುವ ಚೀಲವನ್ನು ಬಿಚ್ಚಿ ನೋಡಲಾಗಿ ಅದರಲ್ಲಿ 13 ಓರಿಜಿನಲ್ ಚಾಯ್ಸ ಹಾಗೂ 90 ಎಂ ಎಲ್ ನ ಓಲ್ಡ ಟವನ್ 32 ಪೌಚ್ಗಳು ಇತ್ತು. ಸದರಿ ಓರಿಜಿನಲ್ ಚಾಯ್ಸ ನೇದ್ದರ ಅಂದಾಜು ಕಿಮ್ಮತ್ತು ರೂ. 456/- ಇತ್ತು. ಅದೇ ರೀತಿ 32 ಒಲ್ಡ ಟವನ್ ನೇದ್ದರ ಅಂದಾಜು ಕಿಮ್ಮತ್ತು ರೂ. 1699/- ಇತ್ತು. ನಂತರ ಸದರಿ ಮು ಮಾಲ್ನು ವಶ ಪಡಿಸಿಕೊಂಡು ಅದರಲ್ಲಿ ಒಂದು

ಓರಿಜಿನಲ್ ಚಾಯ್ಸ್ ಹಾಗೂ ಒಂದು ಓಲ್ಡ ಟವನ್ ಪೌಕಚ್ ಗಳನ್ನು ರಾಸಾಯನಿಕ ಪರೀಕ್ಷೆಕುರಿತು ಪ್ರತತ್ಯೆಕಾವಾಗಿ ಜಪ್ತಿ ಪಡಿಸಿಕೊಂಡು ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿಕೊಂಡು ಅದಕ್ಕೆ ಪಂಚರ ಸಹಿಯಳ್ಳ ಚಿಟೆಯನ್ನು ಅಂಟಿಸಲಾಯಿತು. ಉಳಿದ ಮು ಮಾನ್ನು ಮುಂದಿನ ಕ್ರಮಕ್ಕಾಗಿ ಚಾ ಸಾ 9 ರವರಿಗೆ ಒಪ್ಪಿ ಸಿದ್ದು ಇರುತ್ತದೆ. ಹೋಡಿ ಹೋಗಿದ್ದ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಆತನ ಹೆಸರು ನರಸಯ್ಯ ತಂದೆ ಲಕ್ಷ್ಮಯ್ಯ ಕಲಾಲ್ ಸಾಕಿನ್ ಹೂಡಾ ಬಿ ಎಂದು ಗೊತ್ತಾಗಿರುತ್ತದೆ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತನು ಆ ವ್ಯಕ್ತಿ ಆಗಿದ್ದನು.

**ಪಾಟೀಸವಾಲುಃ** ಆರೋಪಿ ಪರ ವಕೀಲರಿಂದಃ

ಈ ಘಟನೆಕ್ಕಿಂತ ಮೊದಲು ಆರೋಪಿತನಿಗೆ ನಾನು ಗಸ್ತು ಕರ್ತವ್ಯದಲ್ಲಿ ಇದ್ದಾಗ ನೋಡಿದ್ದೇನೆ. ಆರೋಪಿತನ ಹೆಸರು ಹೇಳಿದವರ ಹೇಳಿಕೆಯನ್ನು ಪಡೆದುಕೊಂಡಿಲ್ಲ. ಮು ಮಾ 1 ಮತ್ತು 2 ಸರ್ಕಾರಿಕ್ಕೆ ಸಂಬಂದಿಸಿದೆ ಎಂದರೆ ಸಾಕ್ಷಿಯು ಆರೋಪಿತನು ಯಾವುದೇ ಪರವಾನಗಿ ಪಡೆದುಕೊಂಡಿಲ್ಲ ಅಕ್ರಮವಾಗಿ ಮಾರಾಟ ಮಾಡುತ್ತಿದ್ದಾನೆ ಎಂದು ನುಡಿಯುತ್ತಾರೆ. ಮು ಮಾ 1 ಮತ್ತು 2 ಕ್ಕೆ ಸರ್ಕಾರ ಒಂದು ಅಧಿಕೃತ ನಂಬರು ನೀಡಿರುತ್ತಾರೆ ಎಂದರೆ ಸರಿ. ಸದರಿ ಪೌಚ್ ನ ನಂಬರು ನಮ್ಮ ಹೇಳಿಕೆಯಲ್ಲಿ ಬರೆದಿಲ್ಲ. ಸಾಕ್ಷಿಯು ಮುಂದುವರೆದು 90 ಎಂ ಎಲ್ ಎಂದು ಬರೆದಿದ್ದೇವೆ ಎಂದು ನುಡಿಯುತ್ತಾರೆ. ನಾನು ಘಟನಾ ಸ್ಥಳಕ್ಕೆ ಹೋದಾಗ ಸ್ಥಳಲ್ಲಿ ಎಷ್ಟು ಜನರು ಇದ್ದರು ಹಾಗೂ ಅದರಲ್ಲಿ ಎಷ್ಟು ಜನರು ಮಧ್ಯಉವನ್ನು ಖರೀದಿಸುತ್ತಿದ್ದು ಎಂಬುದರ ಕುರಿತು ನಮ್ಮಹೇಳಿಕೆಯಲ್ಲಿ ಬರೆದಿಲ್ಲ ಎಂದರೆ ಗೊತ್ತಿಲ್ಲ. ನಾನು ಘಟನಾ ನಡೆದ ದಿನ ಹೂಡಾ ಬಿ ಗ್ರಾಮಕ್ಕೆ ಹೋಗಿಲ್ಲ ಮತ್ತು ನಮ್ಮ ಇಲಾಖೆಯ ಅಂಕಿ ಸಂಖ್ಯೆ ಗೊಸ್ಕರ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂರೆ ಸರಿಯಿಲ್ಲ. ಘಟನೆ ನಡೆದ ನಂತರ ಆರೋಪಿತನನ್ನು ನೋಡಿರುತ್ತೇನೆ. ಮು ಮಾ ಹಾಗೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಿಲ್ಲ.

ದಿಃ 01-06-2023 ರಂದು ನಾನು ಠಾಣೆಯಲ್ಲಿದ್ದಾಗೆ ಚಾ ಸಾ 1 ರವರು ತಿಳಿಸಿದ್ದೇನೆಂದರೆ ಮಳಖೇಡ್ ಠಾಣಾ ವ್ಯಾಪ್ತಿಯ ಹೂಡಾ ಬಿ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾರುತ್ತಿದ್ದಾರೆ ಅಂತಾ ಬಾತಮಿ ಬಂದ ಮೇರೆಗೆ ನಾನು ಮತ್ತು ಚಾ ಸಾ 5 ರಿಂದ 7 ಹಾಗೂ ಪಂಚರಾದ ಚಾ ಸಾ 2ಮತ್ತು

3 ರವರನ್ನು ಬರ ಮಾಡಿಕೊಂಡು ನಮಗೆ ಬಾತಮಿ ಬಂದಿರುವ ವಿಷಯವನ್ನು ತಿಳಿಸಿ ದಾಳಿ ಮಾಡಬೇಕಾಗಿದೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಚಾ ಸಾ 1 ರವರು ತಿಳಿಸಿದ ಮೇರೆಗೆ ನಾವು ಡಿ ವೈ ಎಸ್ ಪಿ ಚಿಂಚೋಳ್ಳಿ ಹಾಗಾ ಸಿ ಪಿ ಐ ಸೇಡಂ ರವರ ಮಾರ್ಗದರ್ಶನದಲ್ಲಿ ಠಾಣೆಯಿಂದ ಸರ್ಕಾರಿ ಜೀಪು ನಂ. ಕೆ ಎ 32 ಜಿ 699 ಮುಖಾಂತರ ಹೂಡಾ ಬಿ ಗ್ರಾಮಕ್ಕೆ ತಲುಪಿ ಬಾಬು ಟೇಲರ್ ರವರ ಮನೆಯ ಹತ್ತಿರ ಪಕ್ಕದ ರಸ್ತೆಯ ಮೇಲೆ ಒಬ್ಬ ವ್ಯಕ್ತಿಯು ಅಕ್ರಮವಾಗಿ ಮಧ್ಯಮಾರಾಟ ಮಾರುತ್ತಿದ್ದಾನೆ ಎಂದು ಖಚಿತ ಪಡಿಸಿಕೊಂಡು ಎಲ್ಲಾರೂ ಒಮ್ಮೆಲೆ ದಾಳಿ ಮಾಡಲಾಗಿ ಆತನು ನಮಗೆ ಸಮವಸ್ತ್ರದಲ್ಲಿ ನೋಡಿ ಅಲ್ಲಿಂದ ಹೋಡಿ ಹೋಗಲಾರಂಬಿಸಿದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಘಟನಾ ಸ್ಥಳದಲ್ಲಿರುವ ಚೀಲವನ್ನು ಬಿಚ್ಚಿ ನೋಡಲಾಗಿ ಅದರಲ್ಲಿ 13 ಓರಿಜಿನಲ್ ಚಾಯ್ಸ ಹಾಗೂ 90 ಎಂ ಎಲ್ ನ ಓಲ್ಡ ಟವನ್ 32 ಪೌಚ್ಗಳು ಇತ್ತು. ಸದರಿ ಓರಿಜಿನಲ್ ಚಾಯ್ಸ ನೇದ್ದರ ಅಂದಾಜು ಕಿಮ್ಮತ್ತು ರೂ. 456/- ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಅದೇ ರೀತಿ 32 ಒಲ್ಡ ಟವನ್ ನೇದ್ದರ ಅಂದಾಜು ಕಿಮ್ಮತ್ತು ರೂ. 1699/- ಇತ್ತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ನಂತರ ಸದರಿ ಮು ಮಾಲ್ನು ವಶ ಪಡಿಸಿಕೊಂಡು ಅದರಲ್ಲಿ ಒಂದು ಓರಿಜಿನಲ್ ಚಾಯ್ಸ ಹಾಗೂ ಒಂದು ಓಲ್ಡ ಟವನ್ ಪೌಕಚ್ ಗಳನ್ನು ರಾಸಾಯನಿಕ ಪರೀಕ್ಷೆಕುರಿತು ಪ್ರತತ್ಯೆಕಾವಾಗಿ ಜಪ್ತಿ ಪಡಿಸಿಕೊಂಡು ಅದನ್ನು ಬಿಳಿ ಬಟ್ಟೆಯಲ್ಲಿ ಸುತ್ತಿಕೊಂಡು ಅದಕ್ಕೆ ಪಂಚರ ಸಹಿಯುಳ್ಳ ಚಿಟಯನ್ನು ಅಂಟಿಸಲಾಯಿತು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಉಳಿದ ಮು ಮಾಲ್ನು ಮುಂದಿನ ಕ್ರಮಕ್ಕಾಗಿ ಚಾ ಸಾ 9 ರವರಿಗೆ ಒಪ್ಪಿ ಸಿದ್ದು ಇರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಹೋಡಿ ಹೋಗಿದ್ದ ವ್ಯಕ್ತಿಯ ಹೆಸರನ್ನು ವಿಚಾರಿಸಲಾಗಿ ಆತನ ಹೆಸರು ನರಸಯ್ಯ ತಂದೆ ಲಕ್ಷ್ಮಯ್ಯ ಕಲಾಲ್ ಸಾಕಿನ್ ಹೂಡಾ ಬಿ ಎಂದು ಗೊತ್ತಾಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ಈ ದಿನ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತನು ಆ ವ್ಯಕ್ತಿ ಆಗಿದ್ದನು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**